## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 735(881) |
| ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 24-08-2026 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದಿಂದ ಹೊಸ ಡಿಪ್ಲೊಮಾ ಕಾಲೇಜುಗಳನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು: | ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್ ಗಳನ್ನು ಪ್ರಾರಂಭಿಸಲು ಎಐಸಿಟಿಇ ನವದೆಹಲಿಯವರ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಸದರಿ ಎಐಸಿಟಿಇ ಮಾರ್ಗಸೂಚಿಗಳನ್ವಯ ಪಾಲಿಟೆಕ್ನಿಕ್‌ಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ನಿಯಮಾನಸಾರ ಅವಶ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ಎಐಸಿಟಿಇ, ನವದೆಹಲಿಯವರಿಂದ ಅನುಮೋದನೆಪಡೆದು ಪ್ರಾರಂಭಿಸಬೇಕಾಗಿರುತ್ತದೆ.<br><br>ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಸ್ಥಾಪಿಸಲು ಈ ಕೆಳಕಂಡ ಮೂಲಭೂತ ಸೌಲಭ್ಯಗಳ ಹಾಗೂ ಅನುದಾನದ ಅಗತ್ಯವಿರುತ್ತದೆ. |

| ಕ್ರ ಸಂ | ಅನಾವರ್ತ ಖರ್ಚಿನ ವಿವರ | ಒಟ್ಟು (ರೂ ಲಕ್ಷಗಳಲ್ಲಿ) | ಅಂದಾಜು ಆವರ್ತಿತ ಖರ್ಚು: (ಪ್ರತಿ ವರ್ಷ) | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಮುಖ್ಯ ಕಟ್ಟಡ | 1800.00 | ಸಿಬ್ಬಂದಿ ವೇತನ | 500.00 |
| 2 | ಯಂತ್ರೋಪಕರಣಗಳ ಖರೀದಿ ವೆಚ್ಚ | 400.00 | ನಿತ್ಯೋಪಯೋಗಿ ಸಾಮಗ್ರಿ | 5.00 |
| 3 | ಪೀಠೋಪಕರಣಗಳ ಖರೀದಿ ವೆಚ್ಚ | 100.00 | | |
| 4 | ಪುಸ್ತಕಗಳ ಖರೀದಿ ವೆಚ್ಚ | 20.00 | | |
| ಒಟ್ಟು | | 2320.00 | ಒಟ್ಟು | 406.00 |

ಎಐಸಿಟಿಇ ನವದೆಹಲಿಯವರ 2022-23 ನೇ ಸಾಲಿನ ಮಾರ್ಗಸೂಚಿಯನ್ವಯ ಭೋಧಕರು ಮತ್ತು ವಿದ್ಯಾರ್ಥಿಗಳ ಅನುಪಾತ 1:25 ಆಗಿದ್ದು, ಭೋಧಕ: ಭೋಧಕೇತರ: ಆಡಳಿತ ಸಿಬ್ಬಂದಿ ಹುದ್ದೆಗಳನ್ನು 1:1:0.78 ಅನುಪಾತದಂತೆ ಸೃಜಿಸಬೇಕಾಗಿರುತ್ತದೆ. ಇದರಂತೆ ಅವಶ್ಯವಿರುವ ಭೋಧಕ, ಭೋಧಕೇತರ ಮತ್ತು ಆಡಳಿತ ಸಿಬ್ಬಂದಿ ವಿವರವು ಈಕೆಳಗಿನ ಕೋಷ್ಟಕದಲ್ಲಿರುವಂತಿದೆ.

| ಕ್ರ ಸಂ | ಹುದ್ದೆ | ಹುದ್ದೆಗಳ ಸಂಖ್ಯೆ |
|---|---|---|
| 1 | ಭೋಧಕರು | 32 |
| 2 | ಭೋಧಕೇತರ ಸಿಬ್ಬಂದಿ | 32 |
| 3 | ಆಡಳಿತ ಸಿಬ್ಬಂದಿ | 25 |
| | ಒಟ್ಟು | 89 |

| | | |
|---|---|---|
| ಆ) | ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಸಿಂಧನೂರು ತಾಲ್ಲೂಕಿಗೆ ಈವರೆಗೂ ಸರ್ಕಾರದಿಂದ ಡಿಪ್ಲೊಮಾ ಕಾಲೇಜು ಮಂಜೂರಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಸರ್ಕಾರದ ಗಮನಕ್ಕೆ ಬಂದಿದೆ. |
| ಇ) | ಇದ್ದಲ್ಲಿ, ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಸಿಂಧನೂರು ತಾಲ್ಲೂಕು ಡಿಪ್ಲೊಮಾ ಕಾಲೇಜನ್ನು ಮಂಜೂರು ಮಾಡಲು ಪೂರೈಸದಿರುವ ಅಗತ್ಯ ಮಾನದಂಡಗಳೇನು; | ಸಿಂಧನೂರು ತಾಲ್ಲೂಕಿನ ಸುತ್ತಮುತ್ತ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್/ಡಿಪ್ಲೊಮಾ ಕಾಲೇಜುಗಳ ವಿವರ ಕೆಳಕಂಡಂತಿದೆ: |
| ಈ) | ಸರ್ಕಾರದಿಂದ ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕಿನಲ್ಲಿ ಡಿಪ್ಲೊಮಾ ಕಾಲೇಜನ್ನು ತೆರೆಯಲಾಗುವುದು? | |

| ಕ್ರಮ ಸಂಖ್ಯೆ | ಪಾಲಿಟೆಕ್ನಿಕ್ ಹೆಸರು | ದೂರ (ಕಿ.ಮೀ. ಗಳಲ್ಲಿ) | ಕೋರ್ಸ್ | ಅನುಮೋದಿತ ಪ್ರವೇಶಾತಿ | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಸರ್ಕಾರಿ ಪಾಲಿಟೆಕ್ನಿಕ್, ಮಸ್ಕಿ | 25 | 1.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 | 23 |
| | | | 2.ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 | 37 |
| | | | 3.ಸಿವಿಲ್ ಇಂಜಿನಿಯರಿಂಗ್ | 60 | 12 |
| | | | 4.ಕ್ಲೌಡ್ ಕಂಪ್ಯೂಟಿಂಗ್ | 60 | 0 |
| 2 | ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ | 23 | 1.ಸಿವಿಲ್ ಇಂಜಿನಿಯರಿಂಗ್ | 60 | 62 |
| | | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 63 |
| | | | 3.ಆಟೋಮೊಬೈಲ್ ಇಂಜಿನಿಯರಿಂಗ್ | 30 | 0 |
| | | | 4.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 30 | 31 |
| 3 | ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸಗೂರು | 56 | 1.ಸಿವಿಲ್ ಇಂಜಿನಿಯರಿಂಗ್ | 60 | 49 |
| | | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 37 |
| | | | 3.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 | 53 |
| | | | 4.ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ | 30 | 30 |
| | | | 5.ಆಟೋಮೊಬೈಲ್ ಇಂಜಿನಿಯರಿಂಗ್ | 30 | 11 |
| 4 | ಸರ್ಕಾರಿ ಪಾಲಿಟೆಕ್ನಿಕ್, ಕಂಪ್ಲಿ | 53 | 1.ಸಿವಿಲ್ ಇಂಜಿನಿಯರಿಂಗ್ | 54 | 47 |
| | | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 54 | 57 |
| | | | 3.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 54 | 57 |
| | | | 4.ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ | 54 | 55 |

| | | |
|---|---|---|
| | | ಮೇಲ್ಕಂಡ ಕಾಲೇಜುಗಳಲ್ಲಿ ಸಿಂಧನೂರು ತಾಲ್ಲೂಕಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡಬಹುದಾಗಿದೆ.<br><br>ಉನ್ನತ ಶಿಕ್ಷಣ ಇಲಾಖೆಗೆ ಆಯವ್ಯಯದಲ್ಲಿ ಒದಗಿಸುತ್ತಿರುವ ಅನುದಾನದಲ್ಲಿ ಪ್ರಸ್ತುತ ಇರುವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಬಲವರ್ಧನೆಗೊಳಿಸಲಾಗುತ್ತಿದೆ.<br><br>ಸಿಂಧನೂರು ತಾಲ್ಲೂಕಿನಲ್ಲಿ ನೂತನ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ. |

**ಕಡತ ಸಂಖ್ಯೆ: 92 ಹೆಚ್ ಪಿ ಟಿ 2026**

(ಬಸವರಾಜ ರಾಯರಡ್ಡಿ)
ಉನ್ನತ ಶಿಕ್ಷಣ ಸಚಿವರು